ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಪ್ರಥಮ ದರ್ಜೆಯ ವಿಜ್ಞಾನ ಕಾಲೇಜನ್ನು ಪ್ರಾರಂಭಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1150(1396)

ಸದಸ್ಯರ ಹೆಸರು: ಶ್ರೀ ಮಹದೇವ ಪ್ರಸಾದ ಹೆಚ್.ಎಸ್(ಗುಂಡ್ಲುಪೇಟೆ)

ಉತ್ತರಿಸುವ ಸಚಿವರು: ಡಾ॥ ಜಿ.ಪರಮೇಶ್ವರ(ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆ

ಅ) ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವಿಜ್ಞಾನ ಶಿಕ್ಷಣಕ್ಕೆ ಪ್ರಥಮ ದರ್ಜೆ ವಿಜ್ಞಾನ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವಿಜ್ಞಾನ ಶಿಕ್ಷಣಕ್ಕಾಗಿ ಗುಂಡ್ಲುಪೇಟೆ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಪ್ರಥಮ ದರ್ಜೆ ವಿಜ್ಞಾನ ಕಾಲೇಜನ್ನು 2002-2003ನೇ ವರ್ಷದಲ್ಲಾದರೂ ಪ್ರಾರಂಭಿಸಲಾಗುವುದೇ?

ಉತ್ತರ

ಅ) ಹೌದು.

ಆ) ಇಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ 20 ಅಂಶಗಳ ಕಾರ್ಯಕ್ರಮ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1151(953)

ಸದಸ್ಯರ ಹೆಸರು: ಶ್ರೀ ನೀಲಕಂಠಪ್ಪ.ಬಿ.ಆರ್(ತರೀಕೆರೆ)

ಉತ್ತರಿಸಬೇಕಾದ ಸಚಿವರು: ಶ್ರೀ ಆರ್.ಬಿ.ತಿಮ್ಮಾಪುರ(ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು)

ಪ್ರಶ್ನೆ

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ 20 ಅಂಶಗಳ (ಕ.ಡಿ.ಪಿ) ಕಾರ್ಯಕ್ರಮದ ಎಷ್ಟು ಸಭೆಗಳಾಗಿರುತ್ತವೆ? ಸಭೆಗಳ ವರದಿ ನೀಡುವುದು?

ಅ) ಸಭೆಯಲ್ಲಿ ಗೈರುಹಾಜರು ಆದ ಅಧಿಕಾರಿಗಳ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಇ) ತರೀಕೆರೆ ತಾಲ್ಲೂಕಿನಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು 20 ಅಂಶಗಳ ಸಭೆಗಳು ಆಗಿವೆ?

ಈ) ಈ ಕೆ.ಡಿ.ಪಿ. ಸಭೆಗೆ ಗೈರು ಹಾಜರಾದ ಅಧಿಕಾರಿಗಳ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ? ಮತ್ತು ಮಾಹಿತಿ ನೀಡದ ಅಧಿಕಾರಿಗಳ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಉತ್ತರ

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಅಂದರೆ 1.4.1999 ರಿಂದ 31.3.2001ರವರೆಗೆ ಜಿಲ್ಲಾ ಮಟ್ಟದ ಕೆ.ಡಿ.ಪಿ.(20 ಅಂಶ ಕಾರ್ಯಕ್ರಮವೂ ಸೇರಿದಂತೆ) ತ್ರೈಮಾಸಿಕ ಪರಿಶೀಲನಾ ಸಮಿತಿಯ 5 ಸಭೆಗಳು ನಡೆದಿದೆ.

ಆ) ಗೈರು ಹಾಜರಾದ ಅಧಿಕಾರಿಗಳಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿದೆ. ಅವರುಗಳು ಇನ್ನು ಮುಂದೆ ತಪ್ಪದೆ ತಾವು ಸಭೆಗೆ ಹಾಜರಾಗುವುದಾಗಿ ಸಮಜಾಯಿಷಿ ಉತ್ತರ ನೀಡಿರುತ್ತಾರೆ.

ಇ) ಕಳೆದ 2 ವರ್ಷಗಳಲ್ಲಿ ಅಂದರೆ 1.4.1999ರಿಂದ 31.3.2001ರವರೆಗೆ ತರೀಕೆರೆ ತಾಲ್ಲೂಕಿನ ತಾಲ್ಲೂಕು ಮಟ್ಟದ ಕೆ.ಡಿ.ಪಿ. (20 ಅಂಶ ಕಾರ್ಯಕ್ರಮವೂ ಸೇರಿದಂತೆ) ತ್ರೈಮಾಸಿಕ ಪರಿಶೀಲನಾ ಸಮಿತಿಯ 3 ಸಭೆಗಳು ನಡೆದಿವೆ.

ಈ) ಗೈರು ಹಾಜರಾಗಿದ್ದ ಹಾಗೂ ಮಾಹಿತಿ ನೀಡದಿದ್ದ ಅಧಿಕಾರಿಗಳ ಮೇಲೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ ವಿವರಣೆ ಪಡೆಯಲಾಗಿದೆ. ಅವರುಗಳು ಇನ್ನು ಮುಂದೆ ತಾವು ತಪ್ಪದೆ ಮಾಹಿತಿ ನೀಡುವುದಾಗಿ ಸಮಜಾಯಿಷಿ ಉತ್ತರ ನೀಡಿರುತ್ತಾರೆ.

ಹುಣಸೂರು ಪಟ್ಟಣದಲ್ಲಿರುವ ಆಸ್ಪತ್ರೆಗೆ ಸಿಬ್ಬಂದಿ ಕೊರತೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1152(1085)

ಪ್ರಶ್ನೆ ಕೇಳಿದ ಸದಸ್ಯರು: ಶ್ರೀ ಪಾಪಣ್ಣ.ವಿ(ಹುಣಸೂರು)

ಉತ್ತರಿಸಬೇಕಾದ ಸಚಿವರು: ಡಾ॥ ಎ.ಬಿ.ಮಾಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)